**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ.1215/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಬಿ.ಬಿ. ಅಶೋಕ್ | ಪ್ರಾಸಾ-5 |
| ತಂದೆಯ ಹೆಸರು | : ಭೈರೇಗೌಡ | ಚಾಸಾ-2 |
| ವಯಸ್ಸು | : 63 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೃಷಿ | ದಿನಾಂಕಃ 28.10.2025 |
| ವಾಸಸ್ಥಳ | : ಬಕ್ಕೀ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ನನಗಿದೆ. ಚಾಸಾ-1 ನನ್ನ ಮಗ. ಚಾಸಾ-3 ಮತ್ತು 4 ರವರ ಪರಿಚಯ ನನಗಿದೆ.

ದಿ.16.12.2022 ರಂದು ನಾನು ಮತ್ತು ಚಾಸಾ-1 ತೋಟಕ್ಕೆ ಹೋದ ಸಮಯದಲ್ಲಿ ಆರೋಪಿಗಳು ನಮ್ಮ ತೋಟದಲ್ಲಿ ಕಾಫೀಯನ್ನು ಕುಯ್ಯುತ್ತಿದ್ದರು. ಚಾಸಾ-1 ರವರು ಅದನ್ನು ಪ್ರಶ್ನಿಸಲಾಗಿ, 2 ನೇ ಆರೋಪಿಯು ಚಾಸಾ-1 ರವರಿಗೆ ದೊಣ್ಣೆಯಲ್ಲಿ ಬೆನ್ನಿಗೆ ಮತ್ತು ಕೈಗೆ ಹೊಡೆದಿರುತ್ತಾರೆ. 1 ನೇ ಆರೋಪಿಯು ಕತ್ತಿಯ ಹಿಡಿಯಲ್ಲಿ ಚಾಸಾ-1 ರವರ ಕೈಗೆ ಹೊಡೆದಿರುತ್ತಾರೆ. ನಾನು ಜಗಳವನ್ನು ಬಿಡಿಸಲು ಹೋದ ಸಮಯದಲ್ಲಿ ಆರೋಪಿಗಳು ಅವಾಚ್ಯ ಶಬ್ದದಿಂದ ನಿಂದಿಸಿರುತ್ತಾರೆ. ನಂತರ ನಮ್ಮನ್ನು ಬಿಡುವುದಿಲ್ಲ ಎಂದು ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ನಂತರ ಚಾಸಾ-1 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಬಣಕಲ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ. ನಂತರ ಆರೋಪಿಗಳು ಚಾಸಾ-1 ರವರ ಮೊಬೈಲ್ ಫೋನ್ ನ್ನು ಹೊಡೆದಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ಮತ್ತು 2 ನ್ನು ನೋಡಿ ಸದರಿ ವಸ್ತುಗಳಿಂದ ಚಾಸಾ-1 ರವರಿಗೆ ಆರೋಪಿಗಳು ಹಲ್ಲೆ ಮಾಡಿರುವುದಾಗಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಡಿ. ವಕೀಲರಿಂದಃ</u>**

ಚಾಸಾ-1 ರವರು ವಿದ್ಯಾವಂತರು ಎಂದರೆ ಸರಿ. ಆ ದಿನ ನಮ್ಮ ತೋಟದ ಕೆಲಸಕ್ಕೆ ಯಾವುದೇ ಕೆಲಸಗಾರರಿಗೆ ಬರುವಂತೆ ತಿಳಿಸಿರುವುದಿಲ್ಲ. ನಾವು ರೋಬಸ್ಟಾ ಕಾಫೀಯನ್ನು ಬೆಳೆದಿರುತ್ತೇವೆ. ಸದರಿ ಬೆಳೆಯನ್ನು ಫೆಬ್ರವರಿ ಮತ್ತು ಜನವರಿ ಸಮಯದಲ್ಲಿ ಕುಯ್ಲು ಮಾಡಲಾಗುತ್ತದೆ ಎಂದರೆ ಸಾಕ್ಷಿಯು ಡಿಸೆಂಬರ್ ಸಮಯದಲ್ಲೂ ಮಾಡಲಾಗುತ್ತದೆ ಎಂದು ನುಡಿಯುತ್ತಾರೆ. ಆರೋಪಿಗಳು ಅಂದಾಜು 200 ಕೆ.ಜಿ. ಕಾಫೀ ಬೆಳೆಯನ್ನು ಕುಯ್ಲು ಮಾಡಿರಬಹುದು. ನಾವು ಆಸ್ಪತ್ರೆಗೆ ತೆರಳಿದ ನಂತರ ಕಾಫೀ ಬೀಜವನ್ನು ಏನು ಮಾಡಲಾಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಪೋಲಿಸರ ಬಳಿ ಆರೋಪಿಗಳು 200 ಕೆ.ಜಿ. ಕಾಫೀ

ಬೆಳೆಯನ್ನು ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿರುತ್ತೇವೆ. ಸದರಿ ಮಾಹಿತಿಯನ್ನು ದೂರನ್ನು ದಾಖಲಿಸುವ ಸಮಯದಲ್ಲಿ ತಿಳಿಸಿರುತ್ತೇನೆ. ಘಟನೆಯ ನಂತರ ಚಾಸಾ-1 ರವರೊಟ್ಟಿಗೆ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ. ನಾನು ಘಟನೆಯ ನಂತರ ದೂರನ್ನು ಬರೆಸಲು ಪೇಟೆಗೆ ಹೋಗಿರುತ್ತೇನೆ. ಬೆ.11.30 ರಿಂದ 12.00 ರ ಸಮಯದವರೆಗೆ ನಾನು ದೂರನ್ನು ಬರೆಸಲು ಪೇಟೆಗೆ ಹೋಗಿರುತ್ತೇನೆ. ನಾನು ಪೇಟೆಗೆ ದೂರನ್ನು ಬರೆಸಲು ಬಂದ ಸಮಯದಲ್ಲಿ ಚಾಸಾ-1 ರವರು ನನ್ನೊಟ್ಟಿಗೆ ಇರಲಿಲ್ಲ.

ನಿಪಿ-1 ನ್ನು ಟೈಪ್ ಮಾಡಿಸುವ ಸಮಯದಲ್ಲಿ ನಾನು ಮತ್ತು ಚಾಸಾ-1 ಒಟ್ಟಿಗೆ ಇದ್ದೆವು. ಚಾಸಾ-1 ರವರು ಆಸ್ಪತ್ರೆಯಲ್ಲಿ ಎಷ್ಟು ಗಂಟೆಗಳ ಕಾಲ ಇದ್ದರು ಎಂದು ನನಗೆ ತಿಳಿದಿರುವುದಿಲ್ಲ. ಆಸ್ಪತ್ರೆಯಲ್ಲಿ ಪೋಲಿಸರು ಚಾಸಾ-1 ರವರ ಹೇಳಿಕೆಯನ್ನು ಪಡೆದಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚಾಸಾ-1 ರವರು ಆಸ್ಪತ್ರೆಯಿಂದ ಹಿಂತಿರುಗುವಾಗ ಮಧ್ಯಾಹ್ನ ಕಳೆದಿರುತ್ತದೆ. ಚಾಸಾ-1 ರವರು ಆಸ್ಪತ್ರೆಯಿಂದ ಹಿಂತಿರುಗಿದಾಗ ನಾನು ಠಾಣೆಯಲ್ಲಿದ್ದೆ. ಆಸ್ಪತ್ರೆಯಿಂದ ಹಿಂತಿರುಗುವುದನ್ನು ಚಾಸಾ-1 ರವರು ನನಗೆ ತಿಳಿಸಿರುವುದಿಲ್ಲ, ತಾವಾಗಿಯೇ ಬಂದಿರುತ್ತಾರೆ. ನಾನು ಠಾಣೆಗೆ ಎಷ್ಟು ಗಂಟೆಗೆ ಹೋಗಿರುತ್ತೇನೆ ಎಂದು ನೆನಪಾಗುತ್ತಿಲ್ಲ. ನಾವು ದೂರನ್ನು ದಾಖಲಿಸುವಾಗ ಸೀಬೆ ದೊಣ್ಣೆ ಎಂದು ಬರೆಸಿರುತ್ತೇವೆ. ಚಾಸಾ-1 ರವರು ಠಾಣೆಗೆ ಬರುವ ಮುಂಚಿತವಾಗಿ ದೂರನ್ನು ದಾಖಲಿಸಿರುವುದಿಲ್ಲ. ದೂರು ದಾಖಲಿಸಿದ ತಕ್ಷಣದಲ್ಲಿ ಪೋಲಿಸರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ. ಪೋಲಿಸರು ಸ್ಥಳಕ್ಕೆ ಬಂದ ಸಮಯದಲ್ಲಿ ನಾನು ಇರಲಿಲ್ಲ. ಪೋಲಿಸರು ಮಹಜರ್ ಗೆ ಬರುವ ಪೂರ್ವದಲ್ಲಿ ಮಾಹಿತಿಯನ್ನು ನೀಡಿದ್ದರು. ಆರೋಪಿಗಳು ಕದ್ದು ಕುಯ್ದಂತಹ ಕಾಫೀ ಬೀಜವು ಏನಾಯಿತು ಎಂದು ನಾನು ಚಾಸಾ-1 ರವರ ಬಳಿ ಕೇಳಿ ತಿಳಿದುಕೊಂಡಿರುವುದಿಲ್ಲ.

ನಾನು ನಿಪಿ-1 ನ್ನು ಮೂಡಿಗೆರೆಯ ಸ್ಟ್ಯಾಂಪ್ ವೆಂಡರ್ ಬಳಿ ಟೈಪ್ ಮಾಡಿಸಿರುತ್ತೇನೆ. ಘಟನೆ ನಡೆದ ಸಮಯದಲ್ಲಿ ಚಾಸಾ-1 ರವರಿಂದ 10 ಮೀಟರ್ ಅಂತರದಲ್ಲಿ ನಾನು ನಿಂತಿರುತ್ತೇನೆ. ಸ.ನಂ.40 ಕ್ಕೆ ಸಂಬಂಧಿಸಿದಂತೆ ಲತಾಮಣಿ ಎಂಬುವವರು ನಮ್ಮ ವಿರುದ್ಧ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಅಸಲು ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಲತಾಮಣಿಯವರ ಜಮೀನಿಗೆ ನಾವು ಪ್ರವೇಶ ಮಾಡಬಾರದು ಎಂದು ತಾತ್ಕಾಲಿಕ ತಡೆಯಾಜ್ಞೆ ಇತ್ತು ಎಂದರೆ ಪ್ರಕರಣದ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ದಿ.17.01.2024 ರಂದು ಲತಾಮಣಿ ಎಂಬುವವರ ಮೇಲೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಇದೇ ನ್ಯಾಯಾಲಯದಲ್ಲಿ ಸಿಸಿ.899/2022 ರಡಿಯಲ್ಲಿ ಪ್ರಕರಣ ಚಾಲ್ತಿಯಲ್ಲಿರುತ್ತದ ಎಂದರೆ ಸರಿ. ಅಸಲು ದಾವೆಯಲ್ಲಿ ಆಗಿರುವ ಆದೇಶದ ಪ್ರತಿಯಾಗಿ ಈ ಪ್ರಕರಣವನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಿ.16.12.2022 ರಂದು ಆರೋಪಿಗಳು ನಮ್ಮ ತೋಟದಲ್ಲಿ ಕಾಫೀಯನ್ನು ಕೊಯ್ಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಆರೋಪಿಗಳು ಚಾಸಾ-1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ಹಲ್ಲೆ ಮಾಡಿ, ಅವಾಚ್ಯ ಶಬ್ದದಿಂದ ನಿಂದಿಸಿರುವುದಿಲ್ಲ ಎಂದರೆ ಸರಿಯಲ್ಲ.

ಎಂ.ಒ.1 ರಂತಹ ವಸ್ತುಗಳನ್ನು ಆರೋಪಿಗಳಿಗೆ ತೊಂದರೆ ಮಾಡುವ ಉದ್ದೇಶದಿಂದ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿಗಳ ನಡುವೆ ಒಳ್ಳೆ ಬಾಂಧವ್ಯ ಇಲ್ಲ ಎಂದರೆ ಸರಿ. ಆರೋಪಿಗಳು ಲತಾಮಣಿ ಎಂಬುವವರಿಗೆ ಸಹಾಯ ಮಾಡುತ್ತಾರೆ ಎಂಬ ಕಾರಣದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸ.ನಂ.40 ರಲ್ಲಿ ಪ್ರಕರಣ ನಡೆದಿರುತ್ತದೆ ಎಂದು ನಮ್ಮ ದೂರಿನಲ್ಲಿ ತಿಳಿಸಿರುತ್ತೇವೆ. ಸದರಿ ಜಾಗವು ನನಗೆ ಸೇರಿದ್ದಾಗಿರುತ್ತದೆ ಎಂದು ತೋರಿಸಲು ಪೋಲಿಸರು ಕೇಳಿರದ ಮೇರೆಗೆ ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ. ಒಂದು ವೇಳೆ ಸದರಿ ಜಾಗವು ನಮಗೆ ಸೇರಿದ್ದಾಗಿದ್ದರೆ ದಾಖಲಾತಿಯನ್ನು ನೀಡುತ್ತಿದ್ದೆವು ಎಂದರೆ ಸಾಕ್ಷಿಯು ನಮ್ಮದೇ ಜಾಗ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.